# ಆಹಾ ಸುದ್ದಿ!

★ ಸಸಿತೋಟ



ಲಂಡನ್ನಿನ ಈ ಮನೆಯ ಗೋಡೆಯ ಮೇಲೆ ಮಂದಿ ಯಾವ ರೀತಿ ಸರ್ಕಸ್ ಮಾಡ್ತಿದ್ದಾರೆ ನೋಡಿ. ಯಾವ ಬ್ರ್ಯಾಂಡ್‌ನ ಅಂಟಿರಬಹುದು ಇದು! ಪಾರ್ಸೆಲ್ ಪ್ಯಾಕ್ ಮಾಡಲು ಲಾಯಕ್ಕಾದ ಅಂಟು ಎಂದು ಯೋಚಿಸುವ ಮುನ್ನ ಜಾತ್ರೆ, ಸಂತೆಯಲ್ಲಿ ನೋಡಿದ ರುಂಡ-ಮುಂಡ ಬೇರೆಯಾದ ಹುಡುಗಿಯ ದೇಹ ನೆನಪಿಸಿಕೊಳ್ಳಿ. ಅದೇ ಕನ್ನಡಿ ಪರಿಣಾಮವನ್ನು ಬಳಸಿಕೊಂಡು ಅರ್ಜೆಂಟೀನಾ ಕಲಾವಿದ ಲಿಯೊನಾರ್ಡ್ ಎರ್ಲಿಚ್ ಹೆಸರು ಮಾಡುತ್ತಿದ್ದಾನೆ. ನೆಲದ ಮೇಲಿರುವ ಕಟ್ಟಡದ ಚಿತ್ರದ ಮೇಲೆ ಮಲಗಿದರೂ ಸಾಕು, ಅದು ಬೃಹದಾಕಾರದ ಕನ್ನಡಿಯಲ್ಲಿ ಪ್ರತಿಫಲಿಸುತ್ತದೆ. ಇದರ ಪೇಟೆಂಟ್ ಸಂತೆಯ ಕಲಾವಿದರಿಗೆ ಸೇರಬೇಕು!

'ಸಾಯಲು ಮೂಢ ಮಾರ್ಗಗಳು' ಎಷ್ಟಿವೆ? ಸಾವಿರಾರು. ಹೀಗೊಂದು ಜಾಹೀರಾತನ್ನು ಆಸ್ಟ್ರೇಲಿಯ ಮೆಟ್ರೊ ರೈಲ್ವೆ ಸೇವೆ ಸಿದ್ಧಪಡಿಸಿದೆ. 'ಮನೆಯಲ್ಲಿ ವಿಷಹಾವುಗಳನ್ನು ಸಾಕಿ, ಎರಡೂ ಕಿಡ್ನಿಗಳನ್ನು ಮಾರಾಟ ಮಾಡಿ..' ಹೀಗೆ ಮೂರು ನಿಮಿಷಗಳ ಜಾಹೀರಾತು ಸೃಜನಶೀಲ ಕ್ಯಾನ್ಸ್ ಲಯನ್ಸ್ ಅಂತರರಾಷ್ಟ್ರೀಯ ಉತ್ಸವದಲ್ಲಿ 28 ಪ್ರಶಸ್ತಿಗಳನ್ನು ಬಾಚಿಕೊಂಡಿದೆ. ಅಷ್ಟಕ್ಕೂ ಈ ಜಾಹೀರಾತಿನ ಉದ್ದೇಶವೇನು ಗೊತ್ತೇ? ಮೆಟ್ರೊ ರೈಲು ಪ್ರಯಾಣಿಸುವಾಗ ಎಚ್ಚರಿಕೆಯಿಂದ ಇರಿ ಎಂಬ ಸಂದೇಶ ಪ್ರಚಾರ ಮಾಡುವುದು!

ಇತ್ತೀಚೆಗೆ ಅಮೆರಿಕಾದ ಸ್ಯಾನ್ ಡಿಯಾಗೊ ಆಕಾಶದಲ್ಲಿ ಸೂಪರ್‌ಮ್ಯಾನ್, ಮಿಸ್ ಎಮರ್ಸನ್ ಮೊದಲಾದವರು ಆಕಾಶದಲ್ಲಿ ಕಾಣಿಸಿಕೊಂಡು ಜನ 'ಹಾರುವ ತಟ್ಟೆಗಳೇ?' ಎಂದು ಅಚ್ಚರಿಪಡತೊಡಗಿದರು. ಅಲ್ಲಿಯ ಒಟ್ಟೊ ಡಿಫೆನ್‌ಬ್ಯಾಚ್ ವಿನ್ಯಾಸ ಮಾಡಿದ ರೇಡಿಯೊ ನಿಯಂತ್ರಿತ ಸಣ್ಣ ವಿಮಾನಗಳಿವು. ವಾಣಿಜ್ಯ ಬಳಕೆಗೆ, ಜಾಹೀರಾತಿಗೆ ಬಳಸಬಹುದು. ನಮ್ಮ, ನಿಮ್ಮ ಪ್ರತಿಕೃತಿಗಳನ್ನೂ ನಿರ್ಮಿಸಿ ಈ ರೀತಿ ಹಾರಾಡಿಸಬಹುದು. ಗೆಳೆಯ/ ಗೆಳತಿಯ ಮನೆಯ ಮೇಲಿಂದ ಇಣುಕಿ ನೋಡಬಹುದು.







ಗಿಟಾರಿಸ್ಟ್‌ಗೆ 78 ಬೆರಳುಗಳು. ಡ್ರಮ್ಮರ್‌ಗೆ 21 ಸ್ಟಿಕ್‌ಗಳು. ಕೀಬೋರ್ಡ್ ನುಡಿಸುವವನ ಕಣ್ಣಿಂದಲೇ ಫ್ಲ್ಯಾಷ್ ಲೈಟ್‌ನ ಕಿರಣಗಳ ಅಲೆ ಹೊರಹೊಮ್ಮುತ್ತದೆ. ಅಂದ ಮೇಲೆ ಸಂಗೀತ ಹೇಗಿರಬಹುದು? ಇದು ಯಾವುದೇ ಹಾಲಿವುಡ್‌ನ ಫ್ಯಾಂಟಸಿ ಸಿನಿಮಾ ದೃಶ್ಯವಲ್ಲ. ಜಪಾನಿನ ರೊಬಾಟ್ ವಾದ್ಯ ತಂಡ 'ಝೀ ಮಷಿನ್ಸ್' ಇತ್ತೀಚೆಗೆ ಮೊದಲ ಪ್ರದರ್ಶನ ನೀಡಿದಾಗ ಹುಟ್ಟಿದ ವಾದ್ಯಗಳ ಸದ್ದಿನ ಕಂಪನ ಜಗತ್ತಿನ ಪ್ರಮುಖ ವಾದ್ಯ ತಂಡಗಳ ಸದಸ್ಯರ ಎದೆಗಳಲ್ಲೂ ಕಂಪನ ಹುಟ್ಟಿಸಿದೆಯಂತೆ.

ದುರಂತದ ಸುದ್ದಿ ವರದಿ ಮಾಡುವುದೆಂದರೆ ಎಷ್ಟು ಕಷ್ಟ ಎಂದು ವರದಿ ಮಾಡಿದವರಿಗೇ ಗೊತ್ತು. ಆದರೆ ಕೇದಾರನಾಥ ಮಳೆ- ಪ್ರವಾಹದ ಸುದ್ದಿಯನ್ನು ಸ್ಥಳೀಯ ಚಾನೆಲ್ ಒಂದರ ವರದಿಗಾರ ವರದಿ ಮಾಡಿದ್ದು ಅಲ್ಲಿಯ ಸಂತ್ರಸ್ತನ ಹೆಗಲ ಮೇಲೆ ಕುಳಿತು. ಈ ವರದಿಗಾರನ ಸುದ್ದಿ ಪ್ರಸಾರದ ವೈಖರಿಯ ವಿಡಿಯೋವೇ ಈಗ ದೊಡ್ಡ ಸುದ್ದಿ ಮಾಡಿದೆ. ಪರಿಣಾಮ ಹೆಗಲ ಮೇಲೆ ಕುಳಿತ ವರದಿಗಾರ ನಾರಾಯಣ್ ಕೆಲಸ ಕಳೆದುಕೊಂಡು ಶಾಶ್ವತವಾಗಿ ಮನೆಯಲ್ಲೇ ಕುಳಿತುಕೊಳ್ಳುವಂತಾಗಿದೆ.



ಚೀನಾದ ಗುವಾಂಗ್‌ಕ್ಸಿ ಝುವಾಂಗ್‌ನಲ್ಲಿ ಜರುಗಿದ 'ಡ್ರ್ಯಾಗನ್ ಬೋಟ್' ಹಬ್ಬದಲ್ಲಿ ಕೋಳಿ, ಹಂದಿಗಳನ್ನು ಹಿಡಿಯುವ ಸ್ಪರ್ಧೆ ನಡೆಯಿತು. ಕೈಗಳಲ್ಲಿ ಹಿಡಿದ ಕೋಳಿ, ಹಂದಿಗಳನ್ನು ಹುರಿದು ಹೊಟ್ಟೆಗೆ ಸೇರಿಸುವ ಕಾರ್ಯವೂ ನಡೆಯಿತು. ಕಾಡಿನಲ್ಲಿ ನಡೆಯುತ್ತಿದ್ದ ಹಳೆಯ ಬೇಟೆ ಪದ್ಧತಿಯನ್ನು ಸ್ವಲ್ಪ 'ಮಾಡಿಫೈ' ಮಾಡಲಾಗಿದೆ. ಸಾಕಿದ ಹಂದಿ, ಕೋಳಿಗಳನ್ನು ದೊಡ್ಡ ಹಾಲ್‌ನಲ್ಲಿ ಬಿಟ್ಟು, ಮತ್ತೆ ಹಿಡಿಸಿ ಕಚಕ್ ಎನ್ನಿಸುವುದು.